ಶ್ರೀ ಆರ್. ಸಿ. ಬಾಳೇಕುಂದ್ರಿಗಿ.— ಸರ್ಕಾರದವರು ಬಸ್ ರಾಷ್ಟ್ರೀಕರಣ ಮಾಡುವಾಗ ವಿಶೇಷವಾಗಿ ಗ್ರಾಮಾಂತರ ಪ್ರದೇಶಕ್ಕೆ ಅನುಕೂಲವಾಗುತ್ತದೆ ಎಂದು ಹಳ್ಳಿಗಾಡಿನ ಜನರ ಆಸೆಯಾಗಿತ್ತು. ಈಗ ವಿಶೇಷವಾಗಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅನುಕೂಲವಾಗುತ್ತಿದೆ ಎಂಬುದನ್ನು ನಾನು ಪತ್ರಿಕೆಗಳಲ್ಲಿ ಓದುತ್ತಿದ್ದೇನೆ. ಮಾನ್ಯ ಗುಂಡೂರಾವ್ ಅವರು ೮ ಲಕ್ಷ, ೧೦ ಲಕ್ಷ ರೂಪಾಯಿಗಳನ್ನು ವಿರ್ಚ್ ಮಾಡಿ ಪಟ್ಟಣಗಳಲ್ಲಿ ಬಸ್ ನಿಲ್ದಾಣಗಳನ್ನು ಕಟ್ಟಿಸುತ್ತಿದ್ದಾರೆ. ಕೆಲವು ಕಡೆ ಮಂತ್ರಿಗಳು ಬಸ್ ನಿಲ್ದಾಣ ಕಟ್ಟಿಸಲು ಅಡಿಗಲ್ಲು ಹಾಕಿ ಬಂದಿದ್ದಾರೆ. ಆದ್ದರಿಂದ ಈ ಬಸ್ ನಿಲ್ದಾಣ ಕಟ್ಟಿಸುವಾಗ ಹಳ್ಳಿಗಳಿಗೆ ಇಷ್ಟು ಬಸ್ ನಿಲ್ದಾಣಗಳನ್ನು ಕಟ್ಟಿಸಬೇಕೆಂದು ಏನಾದರೂ ಒಂದು ರೇಶಿಯೋ ಫಿಕ್ಸ್ ಮಾಡಿದ್ದೀರಾ ?

† ಶ್ರೀ ಆರ್. ಗುಂಡೂರಾವ್.— ಬಸ್ ನಿಲ್ದಾಣ ಬಹಳ ಅವಶ್ಯಕವಾಗಿ ಎಲ್ಲಿ ಬೇಕಾಗಿದೆ ಎಂಬುದನ್ನು ಸರ್ವೆ ಮಾಡಿಸಿ, ಹೆಚ್ಚಿನ ಪ್ರಯಾಣಿಕರು ಎಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ ಅಂಥ ಕಡೆ ಮುಖ್ಯವಾಗಿ ಬಸ್ ನಿಲ್ದಾಣ ಮಾಡಬೇಕು ಎಂದು ಸರ್ಕಾರದ ಮತ್ತು ಕಾರ್ಪೊರೇಷನ್ನಿನ ಯೋಜನೆ ಇದೆ. ಆ ಯೋಜನೆಯ ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಪ್ರಯಾಣಿಕರ ಸಂಖ್ಯೆ ಜಾಸ್ತಿ ಇದೆಯೋ ಅಂಥಾ ಕಡೆಗಳಲ್ಲಿ ಬಸ್ ನಿಲ್ದಾಣವನ್ನು ಕಟ್ಟಿಸುತ್ತೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಬಸ್ ನಿಲ್ದಾಣಗಳನ್ನು ಮಾಡಬಾರದು ಎಂದು ಸರ್ಕಾರದ ಉದ್ದೇಶ ಇಲ್ಲ. ಆ ದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲಿ ಬಸ್ ನಿಲ್ದಾಣದ ಅವಶ್ಯಕತೆ ಇದೆ ಅಂಥಾ ಕಡೆಗಳಲ್ಲಿ ಹಂತ ಹಂತವಾಗಿ ಬಸ್ ನಿಲ್ದಾಣದ ಕೆಲಸವನ್ನು ತೆಗೆದುಕೊಂಡು ಅದನ್ನು ಪೂರ್ಯಿಸುತ್ತೇವೆ.

ಶ್ರೀ ಆರ್. ಸಿ. ಬಾಳೆಕುಂದ್ರಿಗಿ.— ಮರಗೋಡಿನಲ್ಲಿ ಶ್ರೀ ನಂಜುಂಡಸ್ವಾಮಿಗಳ ಒಂದು ದೊಡ್ಡ ಮಠ ಇದೆ. ಅಲ್ಲಿಗೆ ಸಾವಿರಾರು ಜನಗಳು ಬಂದು ಹೋಗುತ್ತಾರೆ. ಆದ್ದರಿಂದ ಅಲ್ಲಿಗೆ ಒಂದು ಬಸ್ ನಿಲ್ದಾಣ ಬೇಕಾಗಿದೆ. ಈ ಸಂಬಂಧದಲ್ಲಿ ಕೆಲವು ಜನಗಳು ಅಲ್ಲಿ ಉಪವಾಸವನ್ನು ಸಹ ಮಾಡಿದರು. ಆಗ ಕಾರ್ಪೊರೇಷನ್ ಅಧಿಕಾರಿಗಳು ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಅದಕ್ಕೆ ಸಂಬಂಧಪಟ್ಟ ಯಾವ ಅಂಶವೂ ಇಲ್ಲ. ಆದ್ದರಿಂದ ಈಗಲಾದರೂ ಸರ್ಕಾರದವರು ಅಲ್ಲಿ ಒಂದು ಬಸ್ ನಿಲ್ದಾಣವನ್ನು ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.— ಈಗ ಮಾನ್ಯ ಸದಸ್ಯರು ಸರ್ಕಾರದ ಗಮನವನ್ನು ಆ ಕಡೆ ಸೆಳೆದಿದ್ದಾರೆ. ಮುಂದಿನ ಸಾಲಿನಲ್ಲಿ ಆ ಭಾಗದಲ್ಲಿ ಒಂದು ಬಸ್ ಸ್ಟ್ಯಾಂಡನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾದರೆ ಅದನ್ನು ಮಾಡಿಕೊಡುತ್ತೇವೆ. ಅದನ್ನು ಮಾಡಿಕೊಡಬಾರದು ಎನ್ನುವ ಉದ್ದೇಶವೇನೂ ಇಲ್ಲ.

Land under unauthorised occupation in Haradanahally Hobli in Chamarajanagar Taluk

591 SRI M. C. BASAPPA (Chamarajanagar).— Will the Minister for Revenue be pleased to state .—

(*a*) the extent of land which is under unauthorised occupation in Haradanahally Hobli in Chamarajanagar taluk :

(*b*) the names of villages :

(1) Charak Villages

(2) Becharak villages

where unauthorised cultivation is being done ?

(c) since how many years the parties are cultivating the lands unauthorisedly ;

(d) whether steps are being taken to regularise the same under the r venue rules ?

SRI B. BASAVALINGAPPA (Minister for Revenue) —

(a)

Acres	Guntas
2480	03

FOREST LANDS

(b)

Charak	Becharak
1. Bokkepura	1. Yelachagere
2. Channappanapura	2. Agalabele
3. Honnahalli	
4. Kilagere	
5. Yelagumba	

EXCISE LANDS

Charak	Becharak
1. Amachavadi	Nil
2. Bokkepura	
3. Kilagere	
4. Madalavadi	
5. Voddagalapura	

(c) More than 10 years.

(d) Action will be taken to regularise the lands as soon as the same are released from the Finance Department (Excise) and Food & Forest Department in favour of the Revenue Department.

ಶ್ರೀ ಎಂ. ಸಿ. ಬಸಪ್ಪ.— ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ೨೪೮೦ ಎಕರೆ ಜಮೀನು ಬಗರ್ ಹುಕುಂ ಸಾಗುವಳಿ ಆಗಿದೆ ಎಂದು ಹೇಳಿದ್ದೀರಿ, ಇದು ಅರಣ್ಯ ಜಮೀನು, ಅಬ್ಕಾರಿ ಜಮೀನು ಮತ್ತು ರೆವಿನ್ಯೂ ಜಮೀನು ಇರಬಹುದು. ಆದ್ದರಿಂದ ಇದರ ಬ್ರೇಕಪ್ ಬಗರ್ಸ್ ಎಷ್ಟೆಷ್ಟು ಇದೆ ಎಂಬುದನ್ನು ಕೊಡುತ್ತೀರಾ ?

† ಶ್ರೀ ಬಿ. ಬಸವಲಿಂಗಪ್ಪ.— ಇದರಲ್ಲಿ ೨೦೦೬ ಎಕರೆ ೩ ಗುಂಟೆ ಎಕ್ಸ್ ಬೈಜ್ ಡಿಪಾರ್ಟ್‌ಮೆಂಟಿಗೆ ಸೇರಿರತಕ್ಕುದ್ದು, ಉಳಿದ ಎಕರೆ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಸೇರಿದ್ದು.

ಶ್ರೀ ಎಂ. ಸಿ. ಬಸಪ್ಪ.— ಈ ಜಮೀನು ೧೦ ವರ್ಷಗಳಿಂದ ಅಕ್ರಮ ಸಾಗುವಳಿಯಾಗಿದೆ ಎಂದು ತಾವೇ ಒಪ್ಪಿಕೊಂಡಿದ್ದೀರಿ, ಆ ಜಮೀನನ್ನು ದರ್ಖಾಸ್ತು ಮುಂಬಂತರ ಕೊಡಿಸಬೇಕು ಎಂದು ರೈತರು ಅರ್ಜಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ಈ ಬಗ್ಗೆ ಇಲಾಖೆಯವರು ಏನು ಕ್ರಮ ತೆಗೆದು ಕೊಂಡಿದ್ದಾರೆ ?

ಶ್ರೀ ಬಿ. ಬಸವಲಿಂಗಪ್ಪ.— ಅವರು ಅರ್ಜಿಯನ್ನು ಕೊಟ್ಟರೂ ಸಹ ಅದನ್ನು ನೇರವಾಗಿ ಅವರಿಗೆ ಕೊಡುವುದಕ್ಕಾಗುವುದಿಲ್ಲ. ಎಕ್ಸೈಜ್ ಡಿಪಾರ್ಟ್‌ಮೆಂಟಿನವರು ಅದನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಬಿಡುಗಡೆ ಮಾಡಿಕೊಂಡು ನಂತರ ರೆವಿನ್ಯೂ ಡಿಪಾರ್ಟ್‌ಮೆಂಟಿನವರು ರೈತರಿಗೆ ಮಂಜೂರು ಮಾಡಬೇಕಾಗುತ್ತದೆ. ಈ ಬಗ್ಗೆ ರೆವಿನ್ಯೂ ಇಲಾಖೆಯವರು ಎಕ್ಸೈಸ್ ಡಿಪಾರ್ಟ್‌ಮೆಂಟಿಗೆ ರಕಾರ್ಡನ್ನು ಕಳುಹಿಸಿದ್ದಾರೆ. ಆ ಜಮೀನನ್ನು ಎಕ್ಸೈಜ್ ಡಿಪಾರ್ಟ್‌ಮೆಂಟಿನಿಂದ ರಿಲೀಜ್ ಮಾಡಿದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಸಿ. ಬಸಪ್ಪ.— ಆ ಜಮೀನನ್ನು ಅಬ್ಯಾರಿ ಇಲಾಖೆಗೆ ಸೇರಿದಯೇ ಪೊರತು ಅದರಲ್ಲಿ ಈಚಲಂ ಮರ ಮುತ್ತು ಆ ಇಲಾಖೆಗೆ ಸಂಬಂಧಪಟ್ಟ ವನಸಂಪತ್ತು ಏನಾದರೂ ಇದೆಯೇ ? ಅದಕ್ಕೆ ಸಂಬಂಧಪಟ್ಟ ಫೈಲು ಈಗ ೧೦ ವರ್ಷಗಳಿಂದ ಓಡಾಡುತ್ತಿದೆ ಅಲ್ಲವೆ ?

ಶ್ರೀ ಬಿ. ಬಸವಲಿಂಗಪ್ಪ.— ಅಲ್ಲಿ ವನಸಂಪತ್ತು ಇಲ್ಲ. ಫಾರೆಸ್ಟ್ ಮುತ್ತು ಅಬ್ಕಾರಿ ಇಲಾಖೆಯಿಂದ ಆ ಜಮೀನು ಬಿಡುಗಡೆ ಮಾಡಿದ ತಕ್ಷಣ ಆ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ನಾನು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ. ಎಕ್ಸೈಜ್ ಡಿಪಾರ್ಟ್‌ಮೆಂಟಿನಿಂದ ಅದನ್ನು ಬಿಡುಗಡೆ ಮಾಡುವುದಕ್ಕೆ ಅವರಿಗೆ ಪತ್ರ ಬರೆದು ಜಾಗ್ರತೆಯಾಗಿ ಪುಕಿಂ ತರಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

Compensation of sub-merged Lands under Bhairamadgi tank in Afzalpur Taluk.

610 SRI M. Y. PATIL (Afzalpur).—Will the Minister for Revenue be pleased to state.—

(a) the rates at which land acquisition compensation was paid to the land holders whose lands are submerged under Bhairamadgi Tank in Afzalpur Taluk;

(b) whether it is a fact that the method of valuation of the said lands on the basis of considerations mentioned in the Sale Deeds is not correct;

(c) if so, whether Government intend to increase the compensation to be paid to the land holders ?

SRI B. BASAVALINGAPPA (Minister for Revenue).— (a) Rs. 850, Rs. 800 Rs. 750 and Rs. 700 per acre.

(b) No.

(c) Does not arise.

ಶ್ರೀ ಎಂ. ವೈ. ಪಾಟೀಲ್.— ಅಫಜಲ್‌ಪುರ ತಾಲೂಕಿನ ಭೈರಮಡಗಿ ಕೆರೆಯಿಂದ ಮುಳುಗಡೆ ಜಮೀನಿಗೆ ಪರಿಹಾರವನ್ನು ಒಂದು ಎಕರೆಗೆ ೮೫೦ ರೂ. ೮೦೦ ರೂ. ೭೫೦ ರೂ ಮತ್ತು ೭೦೦ ರೂಪಾಯಿಗಳಂದು ಕೊಟ್ಟಿದ್ದೀರಿ. ಇದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ ?

†ಶ್ರೀ ಬಿ. ಬಸವಲಿಂಗಪ್ಪ.— ಕಾಂಪನ್‌ಸೇಷನ್ ಕೊಡುವುದಕ್ಕೆ ಒಂದು ನಿಯಮಾವಳಿ ಇದೆ. ಆ ಜಮೀನಿನ ಅಕ್ಕಪಕ್ಕದಲ್ಲಿ ಮಾರಾಟವಾದ ಜಮೀನಿನ ಕ್ರಯ ಪತ್ರವನ್ನು ನೋಡಿ ಅದರ ಪ್ರಕಾರ ಕೊಡುತ್ತಾರೆ. ಜೊತೆಗೆ ಜಮೀನಿನ ಪಸ್ಟಲಿಟಿ ಮತ್ತು ಮಾರ್ಕೆಟ್ ವ್ಯಾಲ್ಯೂ ಇದೆಲ್ಲಾ ನೋಡಿ ಕೊಡುತ್ತಾರೆ. ಅಕ್ಕಪಕ್ಕದ ಜಮೀನಿಗೆ ಒಂದು ಎಕರೆ ೩೦೦ ರೂಪಾಯಿಗಳು ಇದ್ದರೆ ಅದರ ವಿಷಯ ಪಟ್ಟಿ ಕೊಟ್ಟಿದ್ದಾರೆ ಅದರಲ್ಲಿ ಕಡಿಮೆ ಕೊಟ್ಟಿದ್ದಾರೆ ಒಂದು ಯಾರೂ ತಿಳಿದುಕೊಳ್ಳುವಾರದು. ಇನ್ನೊಂದು